

# ಜಾನಿ ಜಾನಿ ಎಸ್ ಪಪ್ಪ...

ವಿಜಯ್ ರಾಘವೇಂದ್ರ ನಾಯಕರಾಗಿ ನಟಿಸಿರುವ 'ಜಾನಿ' ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಆ. 11ರಂದು ತೆರೆಗೆ). ಈವರೆಗೆ ಕ್ಯಾಮೆರಾ ಮೂಲಕ ಚಿತ್ರರಸಿಕರನ್ನು ಮರುಳು ಮಾಡುತ್ತಿದ್ದ ಪಿ.ಕೆ.ಎಚ್. ದಾಸ್ ಅವರ ನಿರ್ದೇಶನದ ಚೊಚ್ಚಿಲ ಸಿನಿಮಾ ಇದೆನ್ನುವುದು 'ಜಾನಿ'ಯ ವಿಶೇಷಗಳಲ್ಲೊಂದು.

ದಾಸ್ ರೂಪಿಸಿರುವ ಜಾನಿ ಒಂದು ಬಗೆಯಲ್ಲಿ ಉಂಡಾಡಿ ಗುಂಡನ ರೀತಿಯವನು. ಪುಡಿ ಕೆಲಸಗಳಲ್ಲಿ ತೃಪ್ತಿ ಕಾಣುವ ಅವನಿಗೆ ನಾಯಿಯೊಂದನ್ನು ಹೊರತುಪಡಿಸಿದರೆ ಬಂಧುಮಿತ್ರರು ಎನ್ನುವ ಬಳಗವೇನಿಲ್ಲ. ಇಂಥ ಬಿಡಾಡಿಯ ಬದುಕಿನಲ್ಲಿ ಅನಿರೀಕ್ಷಿತ ಅತಿಥಿಯೊಬ್ಬರ ಪ್ರವೇಶವಾದಾಗ ಏನೆಲ್ಲ ಬದಲಾವಣೆಗಳು ಉಂಟಾಗುತ್ತವೆ ಎನ್ನುವುದು ಸಿನಿಮಾದ ಹೂರಣ. ಬಿಡುಬೀಸಾದ ತರುಣನ ಪಾತ್ರದ ನಿರ್ವಹಣೆ ವಿಜಯ್‌ಗೆ ಸಿಕ್ಕಾಪಟ್ಟೆ ಖುಷಿ ಕೊಟ್ಟಿದೆ.

ನಿರ್ದೇಶಕರ ಸಿನಿಮಾ ಬದ್ಧತೆಯ ಬಗ್ಗೆ ಕೂಡ ಅವರು ಅಭಿಮಾನದ ಮಾತುಗಳನ್ನಾಡುತ್ತಾರೆ. ಸಣ್ಣ ಪುಟ್ಟ ಸಂಗತಿಗಳ ಬಗ್ಗೆ ನಿರ್ದೇಶಕರು ಗಮನ ನೀಡುತ್ತಿದ್ದುದು ಹಾಗೂ ಪ್ರತಿಯೊಂದು ವಿಷಯವನ್ನು ಚಿತ್ರತಂಡದೊಂದಿಗೆ ಚರ್ಚಿಸುತ್ತಿದ್ದುದು ಅವರಿಗೆ ವಿಶೇಷವೆನ್ನಿಸಿದೆ. 'ಇದು ಅಪ್ಪಟ ಸ್ವಮೇಕ್' ಸಿನಿಮಾ ಎನ್ನುವುದು ಅವರ ಖುಷಿಗೆ ಇನ್ನೊಂದು ಕಾರಣ.

ಮಿಲನ ಹಾಗೂ ಜನನಿ 'ಜಾನಿ'ಗೆ ನಾಯಕಿಯರು. ರಂಗಾಯಣ ರಘು, ಸಾಧು ಕೋಕಿಲ, ಶೋಭರಾಜ್, ಸುಂದರಂ ಮಾಸ್ಟರ್ ಹಾಗೂ ಡ್ಯಾನಿ ಕುಟ್ಟಪ್ಪ ತಾರಾಗಣದಲ್ಲಿರುವ ಪ್ರಮುಖರು. ಮಂಗಳೂರು, ಊಟಿಯ ಮೋಹಕ ಪರಿಸರದಲ್ಲಿ ದಾಸ್ ತಮ್ಮ ಚಿತ್ರದ ಶೂಟಿಂಗ್ ನಡೆಸಿದ್ದಾರೆ. ಜೆಸ್ಸಿ ಗಿಫ್ಟ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.



# ದೋಸೆ ಸುಂದರಿಗೆ ಸುಗ್ಗಿಕಾಲ!

'ನೀರ್ ದೋಸೆ' ಸಿನಿಮಾದಲ್ಲಿ ತಮ್ಮ ಅಭಿನಯಕ್ಕೆ ಪ್ರಶಸ್ತಿ ದೊರೆಯದ ಬಗ್ಗೆ ಹರಿಪ್ರಿಯಾ ಬೇಸರ ಮಾಡಿಕೊಂಡಿದ್ದರು. ಅವರು ಹಂಬಲಿಸಿದ್ದ ಪ್ರಶಸ್ತಿ ದೊರೆಯದಿದ್ದರೂ ಅವಕಾಶಗಳಂತೂ ಭರ್ಜರಿಯಾಗಿವೆ. ಒಂದಾದ ಮೇಲೊಂದು ಅವಕಾಶಗಳನ್ನು ಪಡೆಯುತ್ತಿರುವ ಅವರು ಸದ್ಯಕ್ಕೆ ಕನ್ನಡ ಚಿತ್ರರಂಗದ ಬಿಡುವಿರದ ನಾಯಕಿರಲ್ಲೊಬ್ಬರು.

ಪುಟ್ಟಣ್ಣ ಕಣಗಾಲರ 'ಕಥಾಸಂಗಮ' ಕನ್ನಡದ ಪ್ರಯೋಗಶೀಲ ಸಿನಿಮಾಗಳಲ್ಲೊಂದು. ಅದೇ ಹೆಸರಿನ ಚಿತ್ರವೊಂದನ್ನು ರಿಷಬ್ ಶೆಟ್ಟಿ ಈಗ ನಿರ್ದೇಶಿಸುತ್ತಿದ್ದಾರೆ. ಏಳು ಕಥೆಗಳ ಈ 'ಸಿನಿಮಾ ಸಂಕಲನ'ದ ಮುಖ್ಯ ಪಾತ್ರವೊಂದರಲ್ಲಿ 'ನೀರ್ ದೋಸೆ' ಚೆಲುವೆ ನಟಿಸುತ್ತಿದ್ದಾರೆ. 'ಕಿರಿಕ್ ಪಾರ್ಟಿ' ಗೆಲುವಿನ ಹುಮ್ಮಸ್ಸಿನಲ್ಲಿರುವ ರಿಷಬ್‌ರ ಹೊಸ ಚಿತ್ರದ ಬಗ್ಗೆ ಗಾಂಧಿನಗರದಲ್ಲಿ ನಿರೀಕ್ಷೆಗಳಿವೆ. ನಾಗಣ್ಣ ನಿರ್ದೇಶನದ 'ಕುರುಕ್ಷೇತ್ರ' ಹರಿಪ್ರಿಯಾ ನಟಿಸುತ್ತಿರುವ ಮತ್ತೊಂದು ಸಿನಿಮಾ.

ದಿನಕರ್ ತೂಗುದೀಪ್‌ರ ಹೊಸ ಸಿನಿಮಾ 'ಲೈಫ್ ಜೊತೆ ಒಂದು ಸೆಲ್ಫಿ' ಚಿತ್ರದಲ್ಲೂ ಹರಿಪ್ರಿಯಾ ನಾಯಕಿ. ಪ್ರೇಮ್ ಹಾಗೂ ಪ್ರಜ್ವಲ್ ದೇವರಾಜ್ ಈ ಚಿತ್ರದ ನಾಯಕರು. ಗುರು ದೇಶಪಾಂಡೆ ನಿರ್ದೇಶನದ 'ಸಂಹಾರ'ದಲ್ಲಿ ಕೂಡ ಅವರು ನಾಯಕಿ.

ತೆರೆಗೆ ಸಿದ್ಧವಾಗುತ್ತಿರುವ ಆರ್. ಚಂದ್ರು ನಿರ್ದೇಶನದ 'ಕನಕ' ಚಿತ್ರದ ಇಬ್ಬರು ನಾಯಕಿಯರಲ್ಲಿ ಹರಿಪ್ರಿಯಾ ಕೂಡ ಒಬ್ಬರು. ಧ್ರುವ ಸರ್ಜಾ ನಟನೆಯ 'ಭರ್ಜರಿ' ಚಿತ್ರದಲ್ಲೂ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗಷ್ಟೇ ಪುನೀತ್ ರಾಜಕುಮಾರ್ ನಟನೆಯ 'ಅಂಜನೀಪುತ್ರ' ಚಿತ್ರದ ವಿಶೇಷ ಹಾಡೊಂದರಲ್ಲಿ ಅವರು ಕುಣಿದಿದ್ದರು. ಈ ಸಿನಿಮಾಗಳ ಪಟ್ಟಿಯನ್ನು ನೋಡಿದರೆ, ಈ ವರ್ಷ ಮಾತ್ರವಲ್ಲ – 2018ರಲ್ಲೂ ಹರಿಪ್ರಿಯಾ ಬಿಡುವಿಲ್ಲದ ನಟಿಯಾಗಿ ಚಾಲ್ತಿಯಲ್ಲಿರುವುದು ಖಚಿತ.